



# ಬ್ರಿಸ್ಬೇನಿನಲ್ಲಿ ವೇದಾಂತ ಸೆಂಟರ್ ಹಾಗೂ ಬಹೂಪಯೋಗಿ ಕಟ್ಟಡದ ಉದ್ಘಾಟನೆ

ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ **ವೇದಾಂತ ಸೆಂಟರ್**‌ನ ಬ್ರಿಸ್ಬೇನ್ ಶಾಖೆ ಹಾಗೂ ಅಲ್ಲಿನ ಬಹೂಪಯೋಗಿ ಕಟ್ಟಡದ ಉದ್ಘಾಟನೆಯು ೨೦೧೮ರ ಜೂನ್ ೨೮ 'ಸ್ನಾನಯಾತ್ರೆ'ಯ ಪುಣ್ಯದಿನದಂದು ಆರಂಭವಾಗಿ, ಜೂನ್ ೩೦ರಂದು ಕೊನೆಗೊಂಡಿತು.

ಸಿಡ್ನಿ ವೇದಾಂತ ಸೆಂಟರ್‌ಗೆ ಸ್ಪ್ರಿಂಗ್‌ಫೀಲ್ಡ್ ಸಿಟಿ ಕಾರ್ಪೊರೇಶನ್ ವತಿಯಿಂದ ೫೦ ಎಕರೆ ಜಮೀನು ದೇಣಿಗೆಯಾಗಿ ಲಭಿಸಿದ್ದು, ಬ್ರಿಸ್ಬೇನ್ ನಗರದ ಹೊರವಲಯದಲ್ಲಿರುವ ಸ್ಪ್ರಿಂಗ್‌ಫೀಲ್ಡ್‌ನಲ್ಲಿ ಈ ಕೇಂದ್ರದ ಚಟುವಟಿಕೆಗಳನ್ನು ನಡೆಸಲು ಯೋಗ್ಯವಾದ ವನ್ಯ ಪರಿಸರದಿಂದ ಕೂಡಿದೆ. ೨೦೦೯ರಲ್ಲಿ ಸ್ಥಳೀಯ ಆಡಳಿತ ಮಂಡಳಿಯು ಈ ಭೂಮಿಯಲ್ಲಿ ನಡೆಸಲು ಉದ್ದೇಶಿಸಿರುವ 'ವೇದಾಂತ ಪ್ರಿಸಿಂಕ್ಟ್ ಪ್ಲಾನ್' ಎಂಬ ಯೋಜನೆಗೆ ಅಂಗೀಕಾರ ನೀಡಿತು. ಈ ಯೋಜನೆಯ ಮೊದಲ ಹಂತವಾಗಿ ಪ್ರಾರ್ಥನಾ ಮಂದಿರ, ಸಭಾಂಗಣ, ಭೋಜನಾಲಯ, ಸಾಧುನಿವಾಸ ಹಾಗೂ ಅತಿಥಿಗೃಹ, ಗ್ರಂಥಾಲಯ, ಆಫೀಸು ಹಾಗೂ ಇತರ ವಿಭಾಗಗಳನ್ನೊಳಗೊಂಡ ಬೃಹತ್ತಾದ ಒಂದು ಬಹೂಪಯೋಗಿ ಕಟ್ಟಡದ ನಿರ್ಮಾಣ ಕಾರ್ಯ ನಡೆದಿದೆ.

ಜೂನ್ ೨೭ರಂದು ವಾಸ್ತುಪೂಜೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮಗಳ ನಂತರ ೨೮ರಂದು ಗಣೇಶಪೂಜೆ, ಹೋಮ ಹಾಗೂ ೨೯ರಂದು ಚಂಡೀಹೋಮ, ಯತಿಪೂಜೆ ಹಾಗೂ ಕುಮಾರಿಪೂಜೆ ನಡೆದವು. ೩೦ರಂದು ಬೆಳಿಗ್ಗೆ ಸ್ಥಳೀಯ ಹಿರಿಯ ನಾಗರಿಕರಾದ ಡೆಸ್ ಸ್ಯಾಂಡಿಯವರು ಶುದ್ಧಿಕಾರ್ಯವನ್ನು ನಡೆಸಿಕೊಟ್ಟರು. ಅನಂತರ ಸಂನ್ಯಾಸಿಗಳು ಹಾಗೂ ಭಕ್ತರು ಕಟ್ಟಡಕ್ಕೆ ದಿವ್ಯತ್ರಯರ ಭಾವಚಿತ್ರಗಳೊಂದಿಗೆ ಪ್ರದಕ್ಷಿಣೆ ಬಂದರು. ಬಳಿಕ ಕೇರಳದ ಚೆಂಡೆಮೇಳ ನಡೆಯಿತು. ಸ್ವಾಮಿ ತ್ಯಾಗಾನಂದಜಿ ಶ್ರೀರಾಮಕೃಷ್ಣರ ಷೋಡಶೋಪಚಾರ ಪೂಜೆ ಮಾಡಿದರು. ಮಧ್ಯಾಹ್ನದ ನಂತರ ಸರ್ವಧರ್ಮಗಳ ಪ್ರಾರ್ಥನೆ ನಡೆಯಿತು. ಬ್ರಿಸ್ಬೇನಿನ ಶ್ರೀಲಂಕಾ ಬೌದ್ಧ ಮಠದ ಶ್ರೀ ಇಹಲ ಗೊನಗಾಮ ಥೀರೋ, ಇಪ್ಸ್‌ವಿಚ್ ಕ್ಯಾಥೋಲಿಕ್ ಸಮಾಜದ ಫಾದರ್ ಸ್ಟೀಫನ್ ಬ್ಲಿಸ್ ಇವರು ಬೌದ್ಧ ಹಾಗೂ ಕ್ರೈಸ್ತ ದೇಗುಲಗಳನ್ನು ಉದ್ಘಾಟಿಸಿದರು.

ಅನಂತರ ಸಿಕ್ಖ್, ಬಹಾಯಿ, ಸೂಫೀ ಧರ್ಮಗಳಿಗೆ ಸೇರಿದ ಮುಖಂಡರಿಂದ ಪ್ರಾರ್ಥನೆ ನಡೆಯಿತು. ಸ್ಥಳೀಯ ಕೌನ್ಸಿಲರ್ ಶೈಲಾ ಐರ್ಲೆಂಡ್, ಸರ್ಕಾರಿ ಅಧಿಕಾರಿಗಳು, ಪೋಲೀಸ್ ಸಿಬ್ಬಂದಿಗಳು ಹಾಗೂ ಇತರ ಗಣ್ಯರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ದಿನಾಂಕ ೩೦ರಂದು ಸಾಯಂಕಾಲ ಬಹು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಮೀಪದ ರೊಬೆಲ್ಲೆ ಡೊಮೇನ್ ಪಾರ್ಕ್ ಲ್ಯಾಂಡ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ವೀನ್ಸ್‌ಲ್ಯಾಂಡ್ ರಾಜ್ಯದ ಬಹು ಸಾಂಸ್ಕೃತಿಕ ಇಲಾಖೆಯ ಮಂತ್ರಿಗಳಾದ ಸ್ಟರ್ಲಿಂಗ್ ಹಿಂಕ್ಲಿಫ್, ಪಾರ್ಲಿಮೆಂಟಿನ ಫೆಡರಲ್ ಹಾಗೂ ಸ್ಥಳೀಯ ಸದಸ್ಯರುಗಳು, ಇಪ್ಸ್‌ವಿಚ್ ಸಿಟಿ ಕೌನ್ಸಿಲಿನ ಮೇಯರ್ (ಸ್ಪ್ರಿಂಗ್‌ಫೀಲ್ಡ್ ಈ ಕೌನ್ಸಿಲ್‌ಗೆ ಸೇರಿದೆ) ಹಾಗೂ ಇತರ ಗಣ್ಯರು ನೆರೆದಿದ್ದರು. ಸ್ವಾಮಿ ಶ್ರೀಧರಾನಂದಜಿ ಹಾಗೂ ಇತರ ಗಣ್ಯರಿಂದ ಪ್ರವಚನ, ಶಾಖಾಕೇಂದ್ರವು ನಡೆಸುವ **ಬಾಲ ಸಂಘ**ದ ಮಕ್ಕಳಿಂದ ಕಿರುನಾಟಕ, ಭಾರತೀಯ ಶಾಸ್ತ್ರೀಯ ಸಂಗೀತ, ಆಸ್ಟ್ರೇಲಿಯಾದ ಮೂಲ ನಿವಾಸಿಗಳಿಂದ ಹಾಗೂ ಆಫ್ರಿಕಾ, ಮಾವೊರಿ (ನ್ಯೂಝಿಲ್ಯಾಂಡ್) ಜಪಾನೀ ಹಾಗೂ ಪಾಶ್ಚಾತ್ಯ ಸಂಪ್ರದಾಯಗಳ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆದವು. ಅಂತಿಮವಾಗಿ ಅದ್ದೂರಿಯ ಸಿಡಿಮದ್ದು ಕಾರ್ಯಕ್ರಮ ಕೂಡ ನಡೆಯಿತು.

ಎಲ್ಲೆಡೆ ಸಂಭ್ರಮದ ಹಾಗೂ ಹಬ್ಬದ ವಾತಾವರಣವಿತ್ತು. ಹಲವು ಧಾರ್ಮಿಕ ಸಂಪ್ರದಾಯಗಳಿಗೆ ಸೇರಿದ ಸಾಧುಗಳು, ಭಕ್ತರು ಹಾಗೂ ಆಗಮಿಸಿದ್ದ ಹಿತೈಷಿಗಳನ್ನು ಆಶೀರ್ವದಿಸಿದರು. ಜುಲೈ ೧, ೨೦೧೮ರಂದು ಹೊಸ ಪ್ರರ್ಥನಾ ಮಂದಿರದಲ್ಲಿ ಅರ್ಧ ದಿನದ ಆಧ್ಯಾತ್ಮಿಕ ಶಿಬಿರ ನಡೆಯಿತು. ಸ್ವಾಮಿ ತ್ಯಾಗಾನಂದಜಿ, ಸ್ವಾಮಿ ಸರ್ವದೇವಾನಂದಜಿ, ಸ್ವಾಮಿ ಯುಕ್ತಾತ್ಮಾನಂದಜಿ, ಸ್ವಾಮಿ ವೀತಮೋಹಾನಂದಜಿ ಹಾಗೂ ಸ್ವಾಮಿ ತತ್ತ್ವಮಯಾನಂದಜಿಯವರು ವೇದಾಂತದ ಶಾಶ್ವತ ಸಾರ್ವತ್ರಿಕ ತತ್ತ್ವಗಳು ತೋರಿಸಿಕೊಡುವ ಮಾರ್ಗದರ್ಶನದಂತೆ ಆಧ್ಯಾತ್ಮಿಕ ಜೀವನವನ್ನು ನಡೆಸುವ ವಿಷಯವಾಗಿ ವಿವರಿಸಿದರು. ಈ ಕಾರ್ಯಕ್ರಮಗಳಲ್ಲಿ ಹಲವು ಮಂದಿ ಭಕ್ತರು ಹಾಗೂ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲರಿಗೂ ಪ್ರಸಾದ ವಿತರಣೆ ಮಾಡಲಾಗಿತ್ತು.









Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020